## ಕೇಂದ್ರ ಸರಕಾರ ಮಧ್ಯ ಪ್ರವೇಶಕ್ಕೆ ಖರ್ಗೆ ಒತ್ತಾಯ

# ಸುಪ್ರೀಂ ಮೀಸಲು ತೀರ್ಪು ಆಘಾತಕಾರಿ

- ಶೋಷಿತ ವರ್ಗದವರು ಎಲ್ಲಿಗೆ ಹೋಗಬೇಕು?
- ಉತ್ತರಖಂಡ ಸರಕಾರ ವಾದ ಮಂಡನೆ ಮಾಡದಿರುವುದು ಅಚ್ಚರಿ
- ತಿದ್ದುಪಡಿ ಮೂಲಕ ರಾಜ್ಯಗಳ ತಪ್ಪು ತಿದ್ದಲಿ

**ವಿಕ ಸುದ್ದಿಲೋಕ** ಬೆಂಗಳೂರು

ಮೀಸಲು ಸೌಲಭ್ಯ ಮೂಲಭೂತ ಹಕ್ಕಲ್ಲ ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಆಘಾತಕಾರಿ ವಿಚಾರ ಎಂದು ಕಾಂಗ್ರೆಸ್ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ರಾಷ್ಟ್ರವೇ ತಲ್ಲಣಗೊಳ್ಳುವಂಥ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ. ಮೀಸಲು ಸೌಲಭ್ಯದ ಬಗ್ಗೆ ಸಂವಿಧಾನದಲ್ಲಿ ಅಚ್ಚುಕಟ್ಟಾಗಿ ಹೇಳಿದ್ದಾರೆ. ಮೀಸಲು ಸೌಲಭ್ಯ ನೀಡುವುದು ರಾಜ್ಯಗಳಿಗೆ ಬಿಟ್ಟ ವಿಚಾರ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ದೇಶವನ್ನು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ,'' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.



''ಮಂಡಲ್ ಆಯೋಗದ ಶಿಫಾರಸಿಗೆ ನ್ಯಾಯ ಕೊಡಬೇಕೆಂದು ಸಂವಿಧಾನದ ಪರಿಚ್ಛೇದ 16ಕ್ಕೆ ತಿದ್ದುಪಡಿ ಮಾಡಿ 16 ಎ ಹಾಗೂ 16 ಬಿ ಜಾರಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಇದು ರಾಜ್ಯಗಳಿಗೆ ಅನ್ವಯವಾಗುವುದಿಲ್ಲ ಎಂದು ಸರಕಾರ ವಾದ ಮಂಡಿಸಬೇಕಿತ್ತು. ಮೀಸಲು ಸೌಲಭ್ಯದ ಬಗ್ಗೆ ಮಾತನಾಡಬೇಕಿತ್ತು. ದತ್ತಾಂಶ ಸಂಗ್ರಹ ಮಾಡಿ ರಾಜ್ಯ ಸರಕಾರ ಮೀಸಲು ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದು ನ್ಯಾಯಾಲಯ ಹೇಳಿದೆ. ಸರಕಾರದ ಕುಮ್ಮಕ್ಕು ಇಲ್ಲದೇ ಈ ರೀತಿಯ ತೀರ್ಪು ಬರುವುದಿಲ್ಲ. ಇದಕ್ಕೆ ಉತ್ತರಖಂಡ ಸರಕಾರ ಕಾರಣ. ಮುಂದೆ ಉತ್ತರ ಪ್ರದೇಶದಲ್ಲೂ ಹೀಗೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಮಧ್ಯ ಪ್ರವೇಶ ಮಾಡಬೇಕು,'' ಎಂದು ಆಗ್ರಹಿಸಿದರು.

''ಕೇಂದ್ರ ಸರಕಾರ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗದ ರಕ್ಷಣೆ ಮಾಡಬೇಕು. ಸಾಮಾಜಿಕ ಹಿನ್ನೆಲೆ ನೋಡಿ ಪ್ರಾತಿನಿಧ್ಯ ನೀಡಬೇಕು. ಈ ವಿಚಾರದಲ್ಲಿ ಉತ್ತರಖಂಡ ಸರಕಾರ ವಾದ ಮಂಡಿಸದೇ ಇರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ. ಭವಿಷ್ಯದಲ್ಲಿ ಇಡಿ ದೇಶದಲ್ಲಿ ಇದು ಉದಾಹರಣೆಯಾಗಬಹುದು. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಮಧ್ಯ ಪ್ರವೇಶ ಮಾಡಿ ಶೋಷಿತ ವರ್ಗದ ರಕ್ಷಣೆ ಮಾಡಬೇಕು,'' ಎಂದು ಒತ್ತಾಯಿಸಿದರು.

''ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಸೂಕ್ತ ತಿದ್ದುಪಡಿ ತಂದು ಆಯಾ ರಾಜ್ಯಗಳ ಮೂಲಕ ತಪ್ಪನ್ನು ಸರಿಪಡಿಸಬೇಕು. ಬೇರೆ ಎಲ್ಲದಕ್ಕೂ ತಮ್ಮ ಶಕ್ತಿಯನ್ನು ಬಳಸುವ ಕೇಂದ್ರ ಸರಕಾರ ಇದಕ್ಕೂ ಪ್ರಯತ್ನಿಸಲಿ. ಈ ವಿಚಾರವನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನಪೀಠದ ಮುಂದೆ ತರಬೇಕು. ಮೀಸಲು ಸೌಲಭ್ಯ ತೆಗೆಯಬೇಕೆಂಬ ಉದ್ದೇಶವನ್ನು ಬಿಜೆಪಿ ಹೊಂದಿದ್ದು ಹಂತ ಹಂತವಾಗಿ ಜಾರಿ ಮಾಡುತ್ತಿದೆ,'' ಎಂದು ಆರೋಪಿಸಿದರು.

ಮೀಸಲು ಸೌಲಭ್ಯ ಸಂವಿಧಾನ ಪ್ರಕಾರ ಮೂಲಭೂತ ಹಕ್ಕಲ್ಲ ಎಂದರೆ ಶೋಷಿತ ವರ್ಗದವರು ಎಲ್ಲಿಗೆ ಹೋಗಬೇಕು? ಶಾಂತಿ ಇದ್ದಲ್ಲಿ ಗಲಭೆ ಸೃಷ್ಟಿಸುವುದು ಬಿಜೆಪಿಯವರ ಉದ್ದೇಶ. ಆರ್‌ಎಸ್‌ಎಸ್ ಮುಖಂಡ ಮೋಹನ್ ಭಾಗವತ್ ಸೇರಿದಂತೆ ನಮ್ಮ ರಾಜ್ಯದಲ್ಲೂ ಕೆಲವರು ಗಲಭೆ ಸೃಷ್ಟಿಸುವ ನಾಯಕರು ಇದ್ದಾರೆ. ಸರ್ದಾರ್ ವಲ್ಲಭ್ ಭಾಯ್ ಪಟೇಲ್ ಕಾಂಗ್ರೆಸ್‌ನವರು. ಅವರನ್ನು ಬಿಜೆಪಿ ಬೇಕಾದಾಗ ಬಳಸಿಕೊಳ್ಳುತ್ತಿದೆ. ಆರ್‌ಎಸ್‌ಎಸ್, ಬಿಜೆಪಿ, ಜನಸಂಘದ ಕಚೇರಿಯಲ್ಲಿ ಅಂಬೇಡ್ಕರ್ ಫೋಟೋ ಯಾವಾಗ ಇತ್ತು? ಸಂವಿಧಾನ ಬದಲಾವಣೆಯೇ ನಮ್ಮ ಗುರಿ ಎಂದು ಬಿಜೆಪಿ ಅಧಿಕಾರಕ್ಕೆ ಬಂದಿದೆ ಎಂದು ದೂರಿದರು.